ಪದಬಂಧ




ಎಡದಿಂದ ಬಲಕ್ಕೆ:

1. ಆದಿತ್ಯನ ಕಾರ್ಯಗಳೇ ಅಲ್ಲಿ ಬಹಳ ಹೆಚ್ಚು (4)
3. ವಾಹನದ ಕ್ಷೇಮಕ್ಕೂ ಹೋಮದಂತಹ ಆಚರಣೆಯೇ? (3)
4. ಪರದೇವತೆಯ ಪೂಜೆ ಅಲ್ಲಿನ ಸಂಪ್ರದಾಯ, ರೂಢಿ (3)
6. ಲಟ್ಟಣಿಗೆ ಬಳಸಿ ಪಟ ಪಟ ಹೊಡೆದಾಟ (4)
7. ತುತ್ತೂರಿ ಊದಿದ ಸ್ಥಳವೇ ಅಲ್ಲಿ ಅತ್ಯಂತ-ಕೊನೆ (4)
9. ಆಫೀಸು-ಅಲ್ಲೇ ಅದರ ಅತ್ತಿತ್ತ (4)
11. ಕರೆತರಲು ಹೋದಾಗ ಲಭಿಸಿದ್ದು ಈ ಒಣತೆಂಗು (3)
13. ಮೇಜಿನ ಎದುರೇ ಸದಾ ಆ ಮುಖ್ಯಸ್ಥ (4)
15. ದಾನ ಪಡೆದೊಡನೇ ಆತ ಅಲ್ಲೇ ಕಣ್ಮರೆ (4)
17. ಮರೆಯಾಗುವವರೆಗೂ ಅದೇ ಹೊಳಪು, ಕಾಂತಿ (3)
18. ಕಾರು ತೋರಿಸಲು ಏಕಿಷ್ಟು ಅವಸರ? (3)
19. ಅಲ್ಕಿತರ ಸಂಖ್ಯೆ ನೂರು ಸಾವಿರಗಳ ಲೆಕ್ಕದಲ್ಲಿ (4)

ಮೇಲಿಂದ ಕೆಳಕ್ಕೆ:

1. ಅನ್ಯರ ಕೆಲಸ-ಬರೀ ಬೆಂಕಿ (3)
2. ಪಟಕವೆಂದು ಮೋಸಮಾಡಿದ ವಂಚಕ (3)
3. ಹೊಳಪು ತುಂಬಿದ್ದರೂ ಅದು ಹೊಸದೇನೂ ಅಲ್ಲ (3)
5. ಸಂತನಿಗೆ ತಕ್ಕಂತಿದೆ ಈ ತಿಂಡಿ (3)
7. ತಡವಾಯಿತೆಂದು ಈ ಪರಿಯ ಆತಂಕವೇ? (3)
8. ಎಂಥ ಗದ್ದಲ! ಕೇಳಿದರೇ ಹೆದರಿಕೆ (3)
9. ಅಧ್ಯಯನ ಮಾಡುವಾಗಲೇ ವರಮಾನ ಹೇಗೆ? (3)
10. ಸಾಮಾನ್ಯದ್ದಲ್ಲ ಬಿಡಿ ಈ ಹಿಗ್ಗು, ಸಂತಸ (3)
12. ಕಾಡೆಮ್ಮೆಗಳ ಸಂಖ್ಯೆ ಬಹಳ ಇಲ್ಲವೇ ಇಲ್ಲ (3)
14. ಜೋರು ಜೋರು ಹೊಡೆತದಿಂದ ಪೂರ್ಣ ಭಗ್ನ (3)
15. ಅಗಲವನ್ನು ನಿರ್ಧರಿಸಲು ಇದೂ ಒಂದು ಅಳತೆ (3)
16. ಹಾಗೆ ನಕ್ಕರೆ ಒಪ್ಪಿಗೆ ಇಲ್ಲವೆಂದೇ ಅರ್ಥ (3)

## ಪದಬಂಧ 11-07-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭಿಧಾನ; 3. 'ರಗನಾ' (ನಾಗರ ಹಿಂದು ಮುಂದು); 4. ಮಹಿಮೆ; 6. ದಿಟ್ಟತನ; 7. ಅಂತಕ; 9. ಬಾಲಿಕೆ; 11. ಸುಶೀಲ; 13. ನನಸು; 15. ಅನುಗ್ರಹ; 17. ಲಕುಮಿ; 18. 'ರಮಾಕು'; 19. ತರುವಾಯ.

ಮೇಲಿಂದ ಕೆಳಕ್ಕೆ:

1. ಅನಾದಿ; 2. ನಮನ; 3. ರಹಿತ; 5. ಮೆಲ್ಲುಲಿ; 7. ಅಂಜಿಸು; 8. ಕಪಿಲ; 9. ಬಾಗಿನ; 10. ಕೆಡಿಸು; 12. ಶೀತಲ; 14. ನಸುಕು; 15. ಅಮಿತ; 16. ಹರಯ.

# ಪ್ರಶ್ನಾಂಕಣ

## 'ಕೆಂಪು' - ಏನು ವಿಶೇಷ?

ಕೆಂಪು (ರೂಬಿ)- ಅದೊಂದು ಅನರ್ಘ್ಯ ರತ್ನ. ಶ್ರೇಷ್ಠತೆಯಲ್ಲಿ ವಜ್ರದ ನಂತರದ ದ್ವಿತೀಯ ಸ್ಥಾನ ಈ ರತ್ನದ್ದೇ. ವಾಸ್ತವವಾಗಿ ಕೆಂಪಿನ ಒಂದು ವಿಧ- 'ಪಿಜನ್ ಬ್ಲಡ್ ರೂಬಿ'- ವಜ್ರಕ್ಕಿಂತ ಅಮೂಲ್ಯ. ಹತ್ತೇ ಕ್ಯಾರೆಟ್ ಎಂದರೆ ಎರಡೇ ಗ್ರಾಂ ತೂಕದ ಅಂಥ ಪ್ರತಿ ಹರಳಿನ ಕನಿಷ್ಠ ಬೆಲೆ ರೂ. ಎರಡು ಲಕ್ಷಕ್ಕೂ ಅಧಿಕ!

ವಜ್ರ 'ಇಂಗಾಲ'ದಿಂದ ರೂಪುಗೊಳ್ಳುವಂತೆ ಕೆಂಪು 'ಅಲ್ಯೂಮಿನಾ'ದಿಂದ (ಅಲ್ಯೂಮಿನಿಯಂ ಆಕ್ಸೈಡ್) ಮೈದಳೆವ ರತ್ನ. ಅಲ್ಯೂಮಿನಾ ಖನಿಜ 'ಕೊರಂಡಂ' ಈ ರತ್ನಕ್ಕೆ ಮೂಲ. ಕೊರಂಡಂ ರತ್ನಗಳು ಹಲವು ವರ್ಣಗಳಲ್ಲಿ ಲಭಿಸುತ್ತವೆ: ಕೆಂಪು, ನೀಲಿ, ಹಳದಿ, ಕಂದು, ಕಪ್ಪು ಇತ್ಯಾದಿ. ಇವುಗಳಲ್ಲಿ ಕೆಂಪು ಬಣ್ಣದ ಹರಳುಗಳು 'ರೂಬಿ' (ಕೆಂಪು); ಉಳಿದವೆಲ್ಲ 'ಸಫೈರ್'ಗಳೆಂದು ವರ್ಗೀಕೃತ. ಅವೂ ರತ್ನಗಳೇ ಆದರೂ ರೂಬಿಯದು ಸಫೈರ್‌ಗಳಿಗಿಂತ ಅಧಿಕ ಸೌಂದರ್ಯ, ಅಧಿಕ ಮೌಲ್ಯ, ಶ್ರೇಷ್ಠತಮ ಸ್ಥಾನ... ಕೊರಂಡಂನ ಕಾಳು ಗಾತ್ರದ ತುಣುಕುಗಳು ಧರೆಯಾಳದಲ್ಲಿ ಹರಳುಗಟ್ಟುವಾಗ ಆಕಸ್ಮಿಕವಾಗಿ ಬೆರೆವ 'ಕ್ರೋಮಿಯಂ' ನಿಂದಾಗಿ ಈ ರತ್ನಕ್ಕೆ ರಕ್ತವರ್ಣ. ಜೊತೆಗೆ ಮತ್ತೂ ಅಪರೂಪವಾಗಿ ಬೆರೆವ ಅಲ್ಪಾತಿ ಅಲ್ಪ ಪ್ರಮಾಣದ 'ರೂಟೈಲ್'ನಂಥ ಕೆಲ ತುಂಬ ನಿರ್ದಿಷ್ಟ ಖನಿಜ ವಸ್ತುಗಳು ಕೆಂಪಿನ ಸೊಬಗನ್ನು ಅಧಿಕಗೊಳಿಸುತ್ತವೆ. 'ಸಿಲ್ಕ್'ಗಳೆಂದೇ ಕರೆಯಲಾಗುವ ಇಂತಹ 'ಮಲಿನ ವಸ್ತು'ಗಳು ಈ ರತ್ನದ



ಮೇಲ್ಮೈಗೆ ರೇಶಿಮೆಯ ನವಿರನ್ನು ಒದಗಿಸುವುದಲ್ಲದೆ 'ಆಸ್ಟೆರಿಸಂ' ಎಂಬೊಂದು ವಿಶೇಷ ಬೆಳಕಿನ ವಿದ್ಯಮಾನಕ್ಕೆ ಕಾರಣವಾಗುತ್ತವೆ. ಅದರ ಪರಿಣಾಮವಾಗಿ ಬೆಳಕು ಬಿದ್ದಾಗ ಅಂಥ ಕೆಂಪಿನ ಮೇಲ್ಮೈಯಲ್ಲಿ ಹೊಳೆವ ನಕ್ಷತ್ರಗಳು ತೇಲುತ್ತಿರುವಂಥ ಮನಮೋಹಕ, ಭ್ರಾಮಕ ದೃಶ್ಯ ಗೋಚರಿಸುತ್ತದೆ.

ಧರೆಯ ನೆಲದ ತಳದಲ್ಲಿ ಕೆಂಪಿನ ಹರಳುಗಳು ರೂಪುಗೊಳ್ಳುತ್ತವೆ. ಭೂ ಕವಚದ ಮ್ಯಾಗ್ಮಾದ ಸಂಪರ್ಕದಲ್ಲಿ, ತೀವ್ರ ಶಾಖ-ಒತ್ತಡಗಳಲ್ಲಿ ನಿರ್ದಿಷ್ಟ ಶಿಲೆಗಳು ರೂಪಾಂತರಗೊಳ್ಳುವಾಗ ತುಂಬ ವಿರಳವಾಗಿ ಈ ರತ್ನ ಮೈದಳೆಯುತ್ತದೆ. ಮುಂದೆಂದೋ ಜ್ವಾಲಾಮುಖಿಗಳ ಮೂಲಕ ಭೂ ನೆಲದಲ್ಲಿ ಕೈಗೆಟುಕುವ ಆಳಕ್ಕೆ ಬಂದು ತಲುಪುತ್ತವೆ. ಕೆಂಪಿನ ಹರಳುಗಳನ್ನು ಕತ್ತರಿಸಿ ಸಾಣೆ ಹಿಡಿದು ತೀವ್ರ ಉಷ್ಣತೆಯಲ್ಲಿ ಚೆನ್ನಾಗಿ ಕಾಯಿಸಿದ ನಂತರವಷ್ಟೇ ಅವುಗಳ ಚೆಲುವು ಗೋಚರ.

ಸರ್ವೋತ್ತಮ ಕೆಂಪಿನ ಹರಳುಗಳು ಬರ್ಮಾದ ಗಣಿಗಳಲ್ಲಷ್ಟೇ ಲಭ್ಯ. ಥಾಯ್ಲ್ಯಾಂಡ್, ಆಸ್ಟ್ರೇಲಿಯಾ, ಶ್ರೀಲಂಕಾ ತಾಂಜಾನಿಯಾ ಮತ್ತು ಭಾರತದಲ್ಲೂ ರೂಬಿ ದೊರಕುತ್ತಿದೆಯಾದರೂ ಅವುಗಳದು ಬಹಳ ಸಾಮಾನ್ಯ ಗುಣಮಟ್ಟ. ಕೆಂಪು ಬಣ್ಣದವೇ ಇನ್ನೂ ಹಲವಾರು ಆಭರಣ ಯೋಗ್ಯ ಖನಿಜಗಳು- ಸ್ಪೈನೆಲ್, ಗಾರ್ನೆಟ್, ಟೂರ್ಮಲೀನ್ ಇತ್ಯಾದಿ- ಇವೆಯಾದರೂ ಸೌಂದರ್ಯ, ಅಪರೂಪತೆ, ಗಟ್ಟಿತನ ಮುಂತಾದ ಯಾವ ಗುಣದಲ್ಲೂ ರೂಬಿಗೆ ಅವು ಕಿಂಚಿತ್ತೂ ಸಾಟಿ ಇಲ್ಲ. ಅದೇ ಕೆಂಪಿನ ವಿಶೇಷ.

■ ಎನ್. ವಾಸುದೇವ್